**ಓ.ಎಸ್.99/2019**

**ಪಿ.ಡಬ್ಲ್ಯೂ-1**

**ಸಾಕ್ಷಿಯನ್ನು ಪುನಃ ಕರೆಸಿ ದಿನಾಂಕಃ 08.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ .ಬಿ ಎಮ್ ವಕೀಲರಿಂದಃ**

ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ. ನ್ಯಾಯಾಲಯದಿಂದ ಅಳತೆಗಾಗಿ ಸರ್ವೆಯರನ್ನು ನೇಮಿಸಿ ಅವರು ಸ್ಥಳಕ್ಕೆ ಬೇಟಿ ನೀಡಿದ್ದರು ಎಂದರೆ ಸರಿ. ನಮ್ಮ ಮತ್ತು ಅಕ್ಕಪಕ್ಕದ ಸರ್ವೆ ನಂಬರಗಳನ್ನು ಅಳತೆ ಮಾಡಿರುತ್ತಾರೆ, ಅದರಂತೆ ವಾದಿಯ ಆಸ್ತಿಯನ್ನು ಅಳತೆ ಮಾಡಿರುತ್ತಾರೆ. ಕಮಿಷ್ನರರವರ ವರದಿಯಲ್ಲಿ ಅಳತೆ ಮಾಡಿದಾಗ ಎಷ್ಟು ಚೈನ್ ಲಿಂಕ್‌ಗಳು ಬಂದಿವೆ ಎಂಬ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ನಮ್ಮ ಸ್ವತ್ತಿನ ಪಶ್ಚಿಮ ದಿಕ್ಕಿನ ಗಡಿ ನೇರವಾಗಿರುತ್ತದೆ ಎಂದರೆ ಸರಿ. ಪೂರ್ವ ದಿಕ್ಕಿನ ದಕ್ಷಿಣ ಭಾಗದಲ್ಲಿ ಸ್ವಲ್ಪ ಓರೆಯಾಗಿರುತ್ತದೆ ಎಂದರೆ ಸರಿ. ನಮ್ಮ ಸ್ವತ್ತಿನ ಪೂರ್ವದಲ್ಲಿ ರಾಮಪುರ ಕಾಲುವೆ ಹರಿದು ಹೋಗಿರುವ ಕಾರಣ ಆ ರೀತಿ ದಕ್ಷಿಣ ಭಾಗದಲ್ಲಿ ಓರೆಯಾಗಿರುತ್ತದೆ ಎಂದರೆ ಸರಿ. ನಮ್ಮ ಸ್ವತ್ತಿನ ಒಟ್ಟು ವಿಸ್ತೀರ್ಣ **4** ಎಕರೆ **24** ಗುಂಟೆ ಯಲ್ಲಿ ಆ ರೀತಿ ನಾಲೆ ಹೋಗಿರುವ ವಿಸ್ತೀರ್ಣ ವನ್ನು ಕಳೆಯದೇ ಸದರಿ ಜಾಗವು ನನಗೆ ಸೇರಿದ್ದು ಎಂದು ಸಂಪೂರ್ಣ ವಿಸ್ತೀರ್ಣ ತೋರಿಸಿ ಪ್ರತಿವಾದಿಗಳ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ದಾವೆ ಸಲ್ಲಿಸಿರುತ್ತಿರಾ ಎಂದರೆ ಸಾಕ್ಷಿಯು ಹಿಂದಿನಿಂದ ಸದರಿ ನಾಲೆಯನ್ನು ಹೊರತುಪಡಿಸಿ ವಿಸ್ತೀರ್ಣ ಅಸ್ತಿತ್ವದಲ್ಲಿ ಇರುವುದಾಗಿ ನುಡಿಯುತ್ತಾರೆ.

ಸದರಿ ದಿನ ನ್ಯಾಯಾಲಯದಿಂದ ಕಮಿಷ್ನರರವರು ಸ್ಥಳಕ್ಕೆ ಬೇಟಿ ನೀಡಿದಾಗ

ನಿಗಮದವರನ್ನು ಕಾಲುವೆ ಬಗ್ಗೆ ವಿಚಾರಿಸಲು ತಿಳುವಳಿಕೆ ನೀಡಿ ಬರಮಾಡಿಕೊಂಡಿಲ್ಲ. ಸದರಿ ದಿನ ಅವರನ್ನು ಕರೆಸಿದ್ದರೆ ಸ್ಥಿತಿಗತಿಗಳು ಹಾಗೂ ನಿರ್ದಿಷ್ಟವಾದ ವಿಸ್ತೀರ್ಣ ತಿಳಿದುಬರುತ್ತದೆ ಎಂಬ ಕಾರಣದಿಂದ ಅದನ್ನು ಮರೆಮಾಚುವ ಉದ್ದೇಶ ಹೊಂದಿದ್ದು, ಶಾಮಿಲಾಗಿ ನಿಗಮದವರನ್ನು ಸ್ಥಳಕ್ಕೆ ಬರಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಪೋಟೋ ತೋರಿಸಿದೆ, ಅದರಲ್ಲಿ ತೋಟವು ನೇರವಾಗಿದ್ದು, ದಕ್ಷಿಣ ದಿಕ್ಕಿನ ಅಂಚಿನಲ್ಲಿ ನಾಲೆ ಹರಿದು ಹೋಗಿದೆ ಎಂದರೆ ಹೌದು ಎಂದು ನೋಡಿ ಗುರುತಿಸುತ್ತಾರೆ. ಸದರಿ ದಾಖಲೆಯನ್ನು ನಿಡಿ-8 ಎಂದು ಗುರುತಿಸಲಾಯಿತು. ನಮ್ಮ ಜಮೀನನಲ್ಲಿ ತೆಂಗು ಬೆಳೆ ಇರುತ್ತದೆ. ನಮ್ಮ ವಾದಪತ್ರದಲ್ಲಿ ತೆಂಗಿನ ಗಿಡಗಳನ್ನು ಹೊರತುಪಡಿಸಿ ಬೇರೆ ಯಾವುದೇ ಬೆಳೆ ಇರುವ ಬಗ್ಗೆ ಪ್ರಸ್ತಾಪಿಸಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಕುಮಾರಸ್ವಾಮಿಯವರ ಜಮೀನು ಇರುತ್ತದೆ. ನಿಪಿ-16 ರಿಂದ 18 ರಲ್ಲಿ ಕಂಡುಬರುವ ಮರಗಳು ಪ್ರತಿವಾದಿಯ ಜಮೀನಿನಲ್ಲಿ ಬೆಳೆದಿದ್ದು, ಅದನ್ನು ಕಬಳಿಸುವ ಉದ್ದೇಶದಿಂದ ಸದರಿ ವಿಸ್ತೀರ್ಣವು ನನಗೆ ಸೇರಿದ್ದು ಎಂದು ಪ್ರತಿಪಾದಿಸುತ್ತೇನೆ ಎಂದರೆ ಸರಿಯಲ್ಲ. ನಿಪಿ-16 ರಲ್ಲಿ ಕಂಡುಬರುವುದು ಹಳೆಯ ಕಲ್ಲಾಗಿರುತ್ತದೆ ಎಂದರೆ ಸರಿ. ಆದರೆ ಅಳತೆ ಮಾಡುವ ವೇಳೆಯಲ್ಲಿ ಹೊಸ ಕಲ್ಲನ್ನು ಅಳವಡಿಸಲಾಗಿದೆ ಎಂದರೆ ಸಾಕ್ಷಿಯು ಸರ್ವೆ ನಂಬರನಲ್ಲಿ ಒಟ್ಟು ನಾಲ್ಕು ಕಲ್ಲುಗಳು ಇರುವುದಾಗಿ ನುಡಿದಿರುತ್ತಾರೆ. ಸಾಕ್ಷಿಗೆ ಒಂದು ಪೋಟೋ ತೋರಿಸಿದ್ದು ಅದರಲ್ಲಿ ಕಂಡು ಬರುವ ಕಲ್ಲು ದಾವಾ ಸ್ವತ್ತಿನ ಪಶ್ಚಿಮಕ್ಕೆ ಇರುವುದಾಗಿ ನುಡಿಯುತ್ತಾರೆ. ಪಶ್ಚಿಮ ಭಾಗದಲ್ಲಿ ಪ್ರತಿವಾದಿ, ಶಶಿಕಲಾ ಹಾಗೂ ರಾಜಮ್ಮ ರವರ ಸ್ವತ್ತುಗಳಲ್ಲಿ ಇರುವ ಮರಗಳ ಸಮೇತ ಜಾಗವನ್ನು ಕಬಳಿಸುವ ಉದ್ದೇಶದಿಂದ ಹೊಸ ಕಲ್ಲನ್ನು ನೆಟ್ಟಿರುತ್ತೇನೆ

ಎಂದರೆ ಸರಿಯಲ್ಲ.

ಪ್ರತಿವಾದಿ ಮತ್ತು ಕುಟುಂಬದವರು 2003 ರಲ್ಲಿ ವಿಭಾಗವಾಗಿದ್ದು, ಪ್ರತ್ಯೇಕ ಸ್ವಾಧೀನದಲ್ಲಿದ್ದರೂ ಸ್ವತ್ತವನ್ನು ಕಬಳಿಸುವ ಉದ್ದೇಶದಿಂದ ಪ್ರತಿವಾದಿಯ ವಿರುದ್ಧ ಮಾತ್ರ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ತಾಯಿ ಮತ್ತು ತಂಗಿಗೆ ವಿಭಾಗ ಆಗಿರುವ ವಿಚಾರ ಹಾಗೂ ಅವರು ಸ್ವಾಧೀನದಲ್ಲಿ ಇರುವ ವಿಚಾರ ತಿಳಿದಿದ್ದರೂ ಅವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವೆಯನ್ನು ಸಲ್ಲಿಸುವ ಮೊದಲು ಅಕ್ಕಪಕ್ಕದ ಮಾಲೀಕರು ಯಾರು ಎಂದು ತಿಳಿದುಕೊಂಡಿರುತ್ತೇನೆ. ದಾವಾ ಸ್ವತ್ತಿನ ಪರೀಶೀಲನೆಗಾಗಿ ಪ್ರತಿವಾದಿಗಳು ನ್ಯಾಯಾಲಯದಿಂದ ಯಾವುದೇ ವಕೀಲರು ಅಥವಾ ಮೊಜಣಿದಾರರನ್ನು ನೀಡಿ ಅಳತೆಗಾಗಿ ನೇಮಿಸಿಕೊಳ್ಳುವುದರಲ್ಲಿ ಯಾವುದೇ ತಕರಾರು ಇರುವುದಿಲ್ಲ. ದಾವಾ ಸ್ವತ್ತಿನ ಯಾವ ಭಾಗದಲ್ಲಿ ಏನು ಮರಗಳು ಇವೆ ಎಂದು ವಾದ ಪತ್ರದಲ್ಲಿ ತೋರಿಸಲು ಯಾವುದೇ ತೊಂದರೆ ಇರಲಿಲ್ಲ.

2015 ರಲ್ಲಿ ಅಳತೆ ಮಾಡಿಸಿದ ನಂತರ ಸುತ್ತಲೂ ಬೇಲಿ ಅಳವಡಿಸಲು ಅನಾರೋಗ್ಯದಿಂದ ಬಳಲುತ್ತಿದ್ದೆ. ನನ್ನ ಮಗ ವ್ಯವಸಾಯ ನೋಡಿಕೊಳ್ಳುವುದಿಲ್ಲ, ಆತ ಇಂಜಿನೀಯರ್ ಆಗಿರುತ್ತಾನೆ. 2015 ರಲ್ಲಿ ಗಡಿ ಗುರುತಿಸಿ ಹದ್ದುಬಸ್ತು ಮಾಡಿಕೊಂಡಿದ್ದು ಅದನ್ನು ಹೊರತುಪಡಿಸಿ 3-4 ಮೀಟರ್ ಮುಂದಕ್ಕೆ ಬೇಲಿ ಅಳವಡಿಸಿಕೊಳ್ಳಲು ಮುಂದಾದಾಗ

ಪ್ರತಿವಾದಿಯು ತಕರಾರು ಮಾಡಿದ ಕಾರಣ ಆತನ ವಿರುದ್ಧ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಗ್ರಾಮಸ್ಥರು ಸಹ ಹದ್ದುಬಸ್ತಿನಂತೆ ಬೇಲಿ ಅಳವಡಿಸಿಕೊಳ್ಳಲು ಸೂಚಿಸಿದ್ದು, ಪ್ರತಿವಾದಿಯ ಸ್ವತ್ತನ್ನು ಕಬಳಿಸದಂತೆ ಕೋರಿಕೊಂಡರು ಆತನ ವಿರುದ್ಧ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಬೇಲಿ ಹಾಕುವ ಮೊದಲು 1, 2 ಹಾಗೂ 3 ಮೀಟರ್ ಅಂತರದಲ್ಲಿ ಹೊಸ ಕಲ್ಲುಗಳನ್ನು ನೆಟ್ಟಿದ್ದು, ಗ್ರಾಮಸ್ಥರು ಸಹ ಆ ರೀತಿ ಮಾಡಬಾರದು ಎಂದು ಸೂಚಿಸಿರುತ್ತಾರೆ ಎಂದರೆ ಸರಿಯಲ್ಲ. 2015 ರ ಹದ್ದುಬಸ್ತಿನ ರೀತಿಯಲ್ಲಿ ಬೇಲಿಯನ್ನು ಅಳವಡಿಸಲು ಪ್ರತಿವಾದಿಯ ಯಾವುದೇ ತಕರಾರು ಇಲ್ಲ ಎಂದರೆ ಸರಿಯಲ್ಲ. ಕಾಲುವೆಗಾಗಿ 7-8 ಗುಂಟೆ ಸ್ವತ್ತು ನನ್ನ ಜಮೀನಿನಲ್ಲಿ ಹೋಗಿದ್ದು ಅದು ಪಹಣಿಯಲ್ಲಿ ಕಂಡುಬರದ ಕಾರಣ ಪ್ರತಿವಾದಿಯ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ನನಗೆ ಸಂಪೂರ್ಣವಾಗಿ ತಿಳಿದಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ದಕ್ಷಿಣಕ್ಕೆ ರಾಮಪುಟ ಕಾಲುವೆ ಇರುವ ಅಂಶವನ್ನು ವಾದಪತ್ರದ ಶೆಡ್ಯೂಲ್ ನಲ್ಲಿ ಕಾಣಿಸಲು ಯಾವುದೇ ತೊಂದರೆ ಇರಲಿಲ್ಲ. ಪ್ರತಿವಾದಿಯ ತಂಗಿ ಹಾಗೂ ತಾಯಿಯ ಜಮೀನು ಪಶ್ಚಿಮ ಭಾಗಕ್ಕೆ ಇದ್ದರೂ ಸಹ ಅದನ್ನು ಶೆಡ್ಯೂಲ್ ನಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿಯು ಪ್ರತಿವಾದಿ ಒಬ್ಬರೇ ಸ್ವಾಧೀನದಲ್ಲಿ ಇರುವುದಾಗಿ ನುಡಿಯುತ್ತಾರೆ. ದಕ್ಷಿಣಕ್ಕೆ ಓಡಾಡಲು ನಾವೆಲ್ಲರೂ ಜಾಗವನ್ನು ಬಿಟ್ಟುಕೊಂಡಿರುತ್ತೇವೆ. ಅದು ಸುಮಾರು 10 ಅಡಿ ಅಗಲದ ದಾರಿ

ಇರಬಹುದು. ಸದರಿ ದಾರಿಯನ್ನು ಬಿಟ್ಟು ಕಮಿಷ್ನರವರು ಅಳತೆ ಮಾಡಿರುತ್ತಾರೆ ಎಂದರೆ ಸರಿ. ಅದರ ಉತ್ತರಕ್ಕೂ ರಸ್ತೆ ಇದ್ದು, ಪ್ರತಿವಾದಿ ಮತ್ತು ಇತರರು ಉಪಯೋಗಿಸುತ್ತಾರೆ ಎಂದರೆ ಸರಿ. ದಕ್ಷಿಣಕ್ಕೆ ಬಿಟ್ಟಿರುವ ದಾರಿ ನನ್ನ ಸ್ವತ್ತಿಗೆ ಸಂಬಂಧಿಸಿದ್ದು ಎಂದರೆ ಸರಿ. ಅದು ಸುಮಾರು 100 ಅಡಿ ಉದ್ದ ಇರಬಹುದು. ಸದರಿ ಜಾಗ ಇರುವ ವಿಸ್ತೀರ್ಣವಾದ 10 ಅಡಿ ಅಗಲ ಮತ್ತು 100 ಅಡಿ ಉದ್ದ ಸ್ಥಳವನ್ನು ಸೇರಿಸಿದಂತೆ ಅಳತೆ ಮಾಡಬೇಕಾಗಿದ್ದು, ಅದನ್ನು ಬಿಟ್ಟು ಅಳತೆ ಮಾಡಿರುವ ಕಾರಣ ಪ್ರತಿವಾದಿಯ ಸ್ವತ್ತು ಇರುವ ಭಾಗಕ್ಕೆ ಒತ್ತುವರಿಯಾಗಿದೆ ಎಂದು ಕಂಡುಬರುತ್ತದೆ ಎಂದರೆ ಸರಿಯಲ್ಲ. ಸೂಕ್ತವಾದ ಕಾರಣಗಳೊಂದಿಗೆ ದಾವೆಯನ್ನು ಸಲ್ಲಿಸದ ಕಾರಣ ಅದು ಊರ್ಜಿತವಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಯಾವುದೇ ತಂತಿ ಬೇಲಿ ನಿರ್ಮಿಸಿಲ್ಲ. ತಂತಿ ಬೇಲಿಯನ್ನು ನಿರ್ಮಿಸುತ್ತೇನೆ ಎಂದು ಹೇಳಿ ಪ್ರತಿವಾದಿಯ ಜಮೀನನಲ್ಲಿರುವ ಮರಗಳನ್ನು ಕಬಳಿಸುವ ಉದ್ದೇಶದಿಂದ ದಾವೆ ಸಲ್ಲಿಸಿರುತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದೆ.

**Sd/-**

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**